ಗದಗ್ ಜಿಲ್ಲೆ ಮುಂಡರಗಿ ಪಟ್ಟಣ ಪಂಚಾಯತ್

2623(3205) ಶ್ರೀ ಪಾಟೀಲ್ ಸಿದ್ದಲಿಂಗನಗೌಡ (ಮುಂಡರಗಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ). ಗದಗ ಜಿಲ್ಲೆ ಮುಂಡರಗಿ ಪಟ್ಟಣ ಪಂಚಾಯತ್‌ನ ಆಡಳಿತಾಧಿಕಾರಿಗಳ ಅವಧಿಯಲ್ಲಿ ಬಿಲ್ ಸಂಖ್ಯೆ: 2305 ದಿನಾಂಕ: 15.09.2001ರಲ್ಲಿ ಫಿನಾಯಲ್ ಖರೀದಿ ಹಾಗೂ ಬಿಲ್ ಸಂಖ್ಯೆ: 68, 70, 107 ರಲ್ಲಿನಂತೆ ಎಲ್ಲಾ ಬಿಲ್ ಸೇರಿ ರೂ. 83,680-00 ಗಳ ವ್ಯತ್ಯಾಸ ಆಗಿರುವುದರ ಬಗ್ಗೆ ತನಿಖೆ ನಡೆಸಿ ವರದಿ ಬಂದ ನಂತರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ, ವರದಿ ಬಂದಿದೆಯೇ; ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ; ವಿವರ ನೀಡುವುದು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು.

ಜಿಲ್ಲಾಧಿಕಾರಿಗಳ ವರದಿಯಂತೆ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಮುಂಡರಗಿ ತಾಲ್ಲೂಕ ಮುರುಡಿ ಕೆರೆ ಕಾಮಗಾರಿ

2625(3208) ಶ್ರೀ ಪಾಟೀಲ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಮುರಡಿ ಕೆರೆಯ ಕಾಮಗಾರಿಯನ್ನು ಭೂಸ್ವಾಧೀನ ಪ್ರಕ್ರಿಯೆ ಮುಗಿದ ನಂತರ ಕೆಲಸ ಪ್ರಾರಂಭಿಸುವುದಾಗಿ ತಿಳಿಸಿದ್ದು, ಭೂ ಸ್ವಾಧೀನ ಕಾರ್ಯ ಮುಗಿದಿದೆಯೇ; ಮುಗಿಯದಿದ್ದರೆ, ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತವೆ; ಹಾಗೂ ಎಲ್ಲಾ ತೊಂದರೆಗಳ ನಿವಾರಣೆಯ ನಂತರ ಎಂದಿನಿಂದ ಕೆಲಸ ಪ್ರಾರಂಭಿಸಲಾಗುತ್ತದೆ;

ಆ) ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಮುರಡಿ ಕೆರೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಮುಗಿದಿರುವುದಿಲ್ಲ. ಈ ಕಾಮಗಾರಿಗಾಗಿ 335 ಎಕರೆ 08 ಗುಂಟೆ ಜಮೀನು ಸ್ವಾಧೀನವಾಗಬೇಕಾಗಿದ್ದು ಇದಕ್ಕಾಗಿ ಸುಮಾರು 167.75 ಲಕ್ಷ ವೆಚ್ಚ ತಗಲಿದೆ. ಭೂಸ್ವಾಧೀನದ 4(1)ರ ಅಧಿಸೂಚನೆ ಹೊರಡಿಸುವ ಮುನ್ನ ಭೂ ಸ್ವಾಧೀನ ವೆಚ್ಚದ ಶೇ. 50 ರಷ್ಟು ಅಂದರೆ ರೂ: 84.00 ಲಕ್ಷವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ. ಅನುದಾನದ ಲಭ್ಯತೆಯ ಮೇಲೆ ಹಣವನ್ನು ಠೇವಣಿ ಮಾಡಿ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪೂರ್ಣಗೊಳಿಸಿಕೊಂಡು ಕಾಮಗಾರಿಯ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) ಪ್ರಸಕ್ತ ಸಾಲಿನ (2003-04) ಆಯವ್ಯಯದಲ್ಲಿ ಸಣ್ಣ ನೀರಾವರಿಯ ಮುಂದುವರಿದ ಎಲ್ಲಾ ಕಾಮಗಾರಿಗಳಿಗಾಗಿ ಲೆಕ್ಕ ಶೀರ್ಷಿಕೆ "4702 ಹೊಸಕೆರೆ ನಿರ್ಮಾಣ (ನಬಾರ್ಡ್)" ಅಡಿಯಲ್ಲಿ ಒಟ್ಟು ರೂ: 526.50 ಲಕ್ಷ ಅನುದಾನ ಒದಗಿಸಲಾಗಿದೆ. ಸದರಿ ಕಾಮಗಾರಿ ಮುಂದುವರಿದ ಕಾಮಗಾರಿಯಾಗಿದ್ದು ಈ ಕಾಮಗಾರಿಗೆ ಪ್ರತ್ಯೇಕವಾಗಿ ಯಾವುದೇ ಅನುದಾನ ಒದಗಿಸಿಲ್ಲ.